# ಆಚಾರ್ಯ ರಾಮಾನುಜರು ಮತ್ತು ಅವರ ಉಪದೇಶಗಳು

ಪ್ರಕಾಶಕರು
ಉಭಯ ವೇದಾಂತ ಪ್ರವರ್ತನ ಸಭಾ, ಮಲ್ಲೇಶ್ವರಂ,
ಬೆಂಗಳೂರು.

1975

# ಆಚಾರ್ಯ ರಾಮಾನುಜರು ಮತ್ತು ಅವರ ಉಪದೇಶಗಳು

ಉಪನ್ಯಾಸಕರು

**ಶ್ರೀ ಉ. ವೇ. ವಿದ್ವಾನ್ ಅಹೋಬಿಲ ಮಠದ**
**ತಿರುಕ್ಕಳ್ಳಂ ನರಸಿಂಹರಾಘವಾಚಾರ್ಯರ್**

ಸಂಗ್ರಹಕರು ಮತ್ತು ಅನುವಾದಕರು

**ಶ್ರೀ ಉ. ವೇ. ವಿದ್ವಾನ್ ಎಂ. ಎ ಲಕ್ಷ್ಮೀತಾತಾಚಾರ್ ಎಂ. ಎ**

ಪ್ರಕಾಶಕರು

**ಉಭಯ ವೇದಾಂತ ಪ್ರವರ್ತನ ಸಭಾ, ಮಲ್ಲೇಶ್ವರಂ,**
**ಬೆಂಗಳೂರು.**

1975

ಮುನ್ನುಡಿ :

ಪ್ರತಿವರ್ಷವೂ ರಾಮಾನುಜಾಚಾರ್ಯರ ವರ್ಷವರ್ಧಂತಿ ಯೆಂದು ನಡೆಯುವ ಉಪನ್ಯಾಸದ ಸಾರವನ್ನು ಒಂದು ಕೈಹೊತ್ತಿಗೆಯಾಗಿ ಪ್ರಕಟಿಸುವ ಪದ್ಧತಿಯು ಈಗ ಎರಡು ವರ್ಷಗಳಿಂದ ನಡೆದು ಬಂದಿದೆ 1975ನೇ ವರ್ಷದ ಉಪನ್ಯಾಸಕರು—'ನೃಸಿಂಹಪ್ರಿಯ' ಪತ್ರಿಕೆಯ ಸಂಪಾದಕರಾದ ಉಭಯವೇದಾಂತ ಪ್ರವರ್ತನಾಚಾರ್ಯ (ಅಹೋಬಿಲಮಠದ ಆಸ್ಥಾನವಿದ್ವಾನ್) ಶ್ರೀಮಾನ್ ತಿರುಕ್ಕಳ್ಳಂ ನರಸಿಂಹರಾಘವಾಚಾರ್ಯರು.

ತಮಿಳುಭಾಷೆಯಲ್ಲಿ ಮಾಡಿದ ಅವರ ಉಪನ್ಯಾಸವನ್ನು ಸಂಗ್ರಹಿಸಿ ಅನುವಾದ ಮಾಡಿಕೊಟ್ಟವರು ಶ್ರೀ ಉ. ವೇ. ವಿದ್ವಾನ್ ಎಂ. ಎ. ಲಕ್ಷ್ಮೀತಾತಾಚಾರ್ಯರು. ಉಪನ್ಯಾಸಕರಿಗೂ ಮತ್ತು ಅನುವಾದಿಸಿದವರಿಗೂ ಸಭೆಯು ಹಾರ್ದಿಕ ಧನ್ಯವಾದಗಳನ್ನು ಅರ್ಪಿಸುತ್ತದೆ. ಈ ಕಿರುಹೊತ್ತಿಗೆಯನ್ನು, ಶ್ರೀವೈಷ್ಣವ ಸಿದ್ಧಾಂತದಲ್ಲಿ ಆಸಕ್ತಿ ಇರುವ ವಾಚಕರು ಸ್ವಾಗತಿಸುತ್ತಾರೆಂದು ಆಶಿಸುತ್ತೇನೆ.

ಇತಿ

ಕಾರ್ಯದರ್ಶಿ

ಎಂ. ಎ. ರಂಗಸ್ವಾಮಿ

ಶ್ರೀಃ

## ಶ್ರೀಮತೇ ರಾಮಾನುಜಾಯ ನಮಃ

ಭೂಲೋಕದಲ್ಲಿ ಜೀವಾತ್ಮನಿಗೆ ಎರಡೇ ಎರಡು ದಿನಗಳು ಶುಭದಿನಗಳು. ಆದ್ದರಿಂದಲೇ "ಶೆನ್ರನಾಳ್ ಶಲ್ಲಾದ ಶೆಜ್ಞಣ್‌ಮಾಲ್ ಎಂಗಳ್ಮಾಲ್ ಎನ್ರನಾಳ್ ಎನ್ನಾಳುಂ ನಾಳಾಹುಂ," ಎಂದು ಆಳ್ವಾರರು ಅನುಗ್ರಹಿಸಿದ್ದಾರೆ. ಈ ಎರಡು ದಿನಗಳನ್ನುಳಿದು ಮತ್ತೆಲ್ಲದಿನಗಳೂ ಜೀವಾತ್ಮನಿಗೆ ಕೆಟ್ಟದಿನಗಳೇ. (ಶ್ರೀರಂಗನಾಥನಿಗೆ) ಪಟಪತ್ರರಾಯಿಗೆ ತಾನು ಧರಿಸಿದ ಪುಷ್ಪಗಳನ್ನು ಸಮರ್ಪಿಸಿ "ಶೂಡಿಕೊಡುತ್ತ ನಾಚ್ಚಿಯಾರ್" ಎಂದು ಹೆಸರು ಪಡೆದಿರುವ ಗೋದಾ ದೇವಿಯು, "ವೇದಮನೈತ್ತುಕ್ಕುಂ ವಿತ್ತಾಹುಂ" (ವೇದಗಳಿಗೆಲ್ಲ ಬೀಜರೂಪವಾದ) ಎಂದು ಕೊಂಡಾಡಲ್ಪಡುವ, ತಮ್ಮ ದಿವ್ಯಪ್ರಬಂಧದಲ್ಲಿ ಇದೇ ಅಭಿಪ್ರಾಯವನ್ನು ಸಮರ್ಥಿಸಿದ್ದಾಳೆ. "ಮಾರ್‌ಹಳಿತ್ತಿಂಗಳ್ ಮದಿನಿರೈನ್ದ ನನ್ನಾಳಾಲ್, ಪಳ್ಳಿಕ್ಕಿಡತ್ತಿಯೋ ಪಾವಾಯ್ ನೀ ನನ್ನಾಳಾಲ್" ಎಂದಲ್ಲವೇ ಅವರ ಶ್ರೀಸೂಕ್ತಿ ಜೀವಾತ್ಮನಿಗೆ ಮಂಗಳಕರವಾದ ಈ ಎರಡು ದಿನಗಳು ಯಾವುವೆಂಬ ಜಿಜ್ಞಾಸೆಯು ಸಹಜವಾಗಿಯೇ ಉಂಟಾಗುತ್ತದೆ ಆ ಎರಡು ದಿನಗಳು —ಜೀವಾತ್ಮನು ಈ ಭೂಲೋಕದಲ್ಲಿ ಜನಿಸುವಾಗ ಪರಮಾತ್ಮನ ಕಟಾಕ್ಷವನ್ನು (ಜಾಯಮಾನ ಕಟಾಕ್ಷವನ್ನು) ಪಡೆದದಿನ—ಜೀವಾತ್ಮನು ಆಚಾರ್ಯ ಸಂಬಂಧವನ್ನು ಪಡೆದು ಭಗವತ್ಸ್ವರೂಪವನ್ನು ತಿಳಿದ ದಿನವೆಂದು ಪೂರ್ವಾಚಾರ್ಯರ ಅಭಿಪ್ರಾಯ.

ಪ್ರತಿಯೊಬ್ಬ ಶ್ರೀ ವೈಷ್ಣವನಿಗೂ ತಮ್ಮ ನಿರವಧಿಕ ಕೃಪೆಯಿಂದ ಭಗವತ್ಸಂಬಂಧವನ್ನು ದೊರಕಿಸಿಕೊಟ್ಟು ಭಗವಂತನ ಸ್ವರೂಪಜ್ಞಾನವನ್ನು ಅನುಗ್ರಹಿಸಿದವರು, ಶ್ರೀ ರಾಮಾನುಜಾಚಾರ್ಯರು. ಆಚಾರ್ಯವರ್ಯರು ಭೂಲೋಕದಲ್ಲಿ ಅವತರಿಸದಿದ್ದ ಪಕ್ಷದಲ್ಲಿ ನಮ್ಮೆಲ್ಲರ ಸ್ಥಿತಿಯು ಏನಾಗು

ತ್ರಿತ್ರೋ ? ಈ ಅಭಿಪ್ರಾಯದಿಂದಲೇ " ಯದ್ಯಯಂಹಿ ಯತಿರಾಜಕೇಸರೀ ನಾಭವಿಷ್ಯದಿಹ ಭುವ್ಯವತೀರ್ಣಃ ಬಾಹ್ಯಕುದೃಗುದ್ಗತವಕ್ತ್ರೈಃ ಮೇದಿನೀ ಪರಿಪೂರಿತಾ ಹ್ಯಭವಿಷ್ಯತ್ "

(ಈ ಭೂಲೋಕದಲ್ಲಿ ಯತಿರಾಜರೆಂಬ ಸಿಂಹವು ಅವತರಿಸದಿದ್ದ ಪಕ್ಷದಲ್ಲಿ ಸಮಸ್ತ ಭೂಲೋಕವೂ, ವೇದಬಾಹ್ಯರು, ಕುದೃಷ್ಟಿಗಳು ಮತ್ತು ಉಚ್ಛೃಂಖಲವಾದ ಪ್ರವೃತ್ತಿ ಉಳ್ಳವರಿಂದಲೂ ತುಂಬಿಹೋಗುತಿತ್ತು) ಎಂದು ಮಹಾಪುರುಷರು ಉದ್ಗರಿಸಿದ್ದಾರೆ.

ವೇದ ವಿರುದ್ಧವಾದ ಮತ ಬೌದ್ಧಮತ. ಬೌದ್ಧಮತಾನುಯಾಯಿಗಳನ್ನು ವೇದಬಾಹ್ಯರು ಎಂದು ಹೇಳುತ್ತಾರೆ. ವೇದಪ್ರಾಮಾಣ್ಯವನ್ನು ಅಂಗೀಕರಿಸಿ ಅವುಗಳಿಗೆ ಅಪಾರ್ಥವನ್ನು ಮಾಡುವ ಕೆಲವು ದರ್ಶನಗಳುಂಟು. ಈ ದರ್ಶನಗಳನ್ನು ಅಂಗೀಕರಿಸುವ ದಾರ್ಶನಿಕರಿಗೆ ' ಕುದೃಷ್ಟಿಗಳು ' ಎಂದು ಹೆಸರು. ಆಚಾರ್ಯ ರಾಮಾನುಜರು ಅವತರಿಸದಿದ್ದ ಪಕ್ಷದಲ್ಲಿ ಸಮಸ್ತ ಭೂಲೋಕವೂ ವೇದಬಾಹ್ಯರಾದ ಬೌದ್ಧರಿಂದಲೂ, ವೇದಕ್ಕೆ ವಿಪರೀತಾರ್ಥ ಕಲ್ಪನೆ ಮಾಡುವ ಕುದೃಷ್ಟಿಗಳಿಂದಲೂ ತುಂಬಿತುಳುಕುತ್ತಿತ್ತು. ರಾಮಾನುಜಾಚಾರ್ಯರ ಪಾದಕಮಲಗಳನ್ನಾಶ್ರಯಿಸಿರುವ ನಾವೆಲ್ಲರೂ ಈ ಎರಡು ಪಂಥಗಳಲ್ಲಿ ಯಾವುದಾದರೊಂದನ್ನು ಆಶ್ರಯಿಸಬೇಕಾಗುತ್ತಿತ್ತು. ಈ ಎರಡು ಪಂಥಗಳಲ್ಲಿ ಯಾವ ಪಂಥವನ್ನಾಶ್ರಯಿಸಿದರೂ ಸರ್ವನಾಶವೆಂಬುದು ನಿರ್ವಿವಾದ. ಇದನ್ನು ಬಹಳ ಸುಂದರವಾದ ದೃಷ್ಟಾಂತದಿಂದ ನಿರೂಪಿಸಿದ್ದಾರೆ ಆಚಾರ್ಯ ಶ್ರೀವತ್ಸಚಿಹ್ನಮಿಶ್ರರು :

**ಬಾಹ್ಯಾಃಕುದೃಷ್ಟಯ ಇತಿದ್ವಿಧ ಇತ್ಯಪಾರಮ್**
**ಘೋರಂ ತಮಸ್ಸಮುಪಯಾಂತಿ ನ ಈಕ್ಷಸೇತಾನ್**
**ಜಗ್ಧಸ್ಯ ಕಾನನಮೃಗೈಃ ಮೃಗತೃಷ್ಣಿಕೇಪ್ಸೋಃ**
**ಕಾಸಾರಸತ್ವ ನಿಪತಸ್ಯಚ ಕೋವಿಶೇಷಃ**

ಒಂದು ಕಾಡಿನಲ್ಲಿ ಎರಡು ಜಿಂಕೆಗಳು ವಾಸಿಸುತ್ತಿದ್ದವು. ಬಾಯಾರಿಕೆಯಿಂದ ನೀರನ್ನರಸುತ್ತ ಒಂದು ಜಿಂಕೆಯು ಬಿಸಿಲು ಕುದುರೆಯನ್ನು ಅರಸಿ ಹೋಗು

ತ್ತಿತ್ತು. ಕಾಡಿನಲ್ಲಿದ್ದ ದುಷ್ಟ ಜಂತುವೊಂದು ಅದನ್ನು ಕೊಂದಿತು. ಮತ್ತೊಂದು ಜಿಂಕೆಯೂ ಬಾಯಾರಿ ಒಂದು ಕೆರೆಯಲ್ಲಿ ನೀರು ಕುಡಿಯಲು ಇಳಿಯಿತು. ಅಷ್ಟರಲ್ಲಿ ಅಲ್ಲಿದ್ದ ಮೊಸಳೆಯು ಅದನ್ನು ಎಳೆದು ತಿಂದಿತು. ಈ ಜಿಂಕೆಗಳಲ್ಲಿ ಒಂದು ಬಿಸಿಲು ಕುದುರೆಯನ್ನರಸಿ ಹೋದರೂ ಅದಕ್ಕೆ ಪ್ರಾಣ ವಿಯೋಗ. ಮತ್ತೊಂದು ನಿಜವಾದ ನೀರನ್ನೇ ಅರಸಿ ಹೋದರೂ ಅದಕ್ಕೂ ಪ್ರಾಣ ವಿಯೋಗ. ಆದ್ದರಿಂದ ಎರಡು ಜಿಂಕೆಗಳಿಗೂ ಯಾವ ವಿಧವಾದ ವ್ಯತ್ಯಾಸವೂ ಇಲ್ಲ. ಇದರಂತೆಯೇ ವೇದಬಾಹ್ಯರ ಮತವನ್ನಾಶ್ರಯಿಸಿದರೂ, ಕುದೃಷ್ಟಿಗಳ ಮತವನ್ನಾಶ್ರಯಿಸಿದರೂ ನಮಗೆ ಹಾನಿಯೆಂಬುದು ನಿರ್ವಿವಾದ.

ಜೀವಾತ್ಮನಿಗುಂಟಾಗಬಹುದಾದ ಇಂತಹ ಹಾನಿಯನ್ನು ತಪ್ಪಿಸಿ ,ತಿರು ನಾರಾಯಣನ ಕೃಪಾಕಟಾಕ್ಷವನ್ನು ಎಲ್ಲರಿಗೂ ದೊರಕಿಸಿ ಕೊಟ್ಟವರು ಭಗವದ್ ಭಾಷ್ಯಕಾರರು. "ಶೆಙ್ಗಣ್ಮಾಲ್ ಎಙ್ಗಳಾ ಲ್" ಶ್ರೀಮನ್ನಾರಾಯಣನೇ "ನನ್ನ ಸ್ವಾಮಿ, ನಾನು ಅವನಿಗೆ ದಾಸಭೂತನಾದವನು" ಎಂಬ ಸಿದ್ಧಾಂತ ವನ್ನು ತೋರಿಸಿ ಕೊಟ್ಟವರು ಆಚಾರ್ಯ ರಾಮಾನುಜರು. ಶಂಕರನ (ಈಶ್ವರನ) ಸಿದ್ಧಾಂತವೂ ಇದೇ. "ದಾಸಾಭೂತಾಸ್ಸ್ವತಸ್ಸರ್ವೇಹ್ಯಾತ್ಮಾನಃ ಪರಮಾತ್ಮನಃ ಅತೋಽ ಅಹಮಪಿತೇದಾಸಃ ಇತಿಮತ್ವಾನಮಾಮ್ಯಹಮ್" ಎನ್ರು "ಮಂತ್ರರಾಜ ಪರಸ್ತೋತ್ರತ್ತಿಲ್ ಸರ್ವಜ್ಞನಾನ ರುದ್ರನ್ ಶೊನ್ನಾನ್" ಎಂಬ ವಚನವಿದೆ. ಹೇ ನೃಸಿಂಹ ನಿನಗೆ ಎಲ್ಲರೂ ದಾಸರಾದ ವರು. ಆದ್ದರಿಂದ ನಾನೂ ನಿನಗೆ ದಾಸನಾದವನು ಎಂದು ತಿಳಿದು ನಿನಗೆ ನಮಸ್ಕರಿಸುವೆನು. ಇದೇ ಅಭಿಪ್ರಾಯವನ್ನೇ ಆಚಾರ್ಯ ರಾಮಾನುಜರು ತಮ್ಮ ಗ್ರಂಥಗಳಲ್ಲಿ ಸ್ಪಷ್ಟಪಡಿಸಿದ್ದಾರೆ. ಪೂರ್ವಾಚಾರ್ಯರು ಸುಂದರವಾದ ಒಂದು ಚರಿತ್ರದಿಂದ ಇದನ್ನು ನಿರೂಪಿಸುವುದುಂಟು. ಒಬ್ಬ ಶಿಷ್ಯನು ಇಬ್ಬರು ಆಚಾರ್ಯರಲ್ಲಿ ವಿದ್ಯಾಭ್ಯಾಸಮಾಡುತ್ತಿದ್ದನು, ಅವರಲ್ಲಿ ಒಬ್ಬ ಆಚಾರ್ಯನು ಅದ್ವೈತಿ, ಮತ್ತೊಬ್ಬನು ವಿಶಿಷ್ಟಾದ್ವೈತಿ. ಅದ್ವೈತಾಚಾರ್ಯರಲ್ಲಿ ಪ್ರಾತಃ ಕಾಲ ಅಧ್ಯಯನವನ್ನು ನಡೆಸಿದನಂತರ, ಮಧ್ಯಾಹ್ನ ವಿಶಿಷ್ಟಾದ್ವೈತ ಆಚಾರ್ಯ ರಲ್ಲಿ ಅವನು ವಿದ್ಯಾಭ್ಯಾಸ ನಡೆಸುತ್ತಿದ್ದ. ಶ್ರೀ ವೈಷ್ಣವಾಚಾರ್ಯರು ಪ್ರಾತಃ ಕಾಲ ಅದ್ವೈತ ಆಚಾರ್ಯರಲ್ಲಿ ತಿಳಿದುಕೊಂಡ ವಿಷಯವೇನು ಎಂದು ಶಿಷ್ಯ ನನ್ನು ಪ್ರಶ್ನಿಸಿದಾಗ, ಶಿಷ್ಯನು "ಸೋಽಹಂ" ಎಂಬುದೇ ಬ್ರಹ್ಮ ವಿದ್ಯೆಯ

ಸಾರ ಎಂದು ತಿಳಿಸಿದ. ಆಗ ಆ ಆಚಾರ್ಯರು ನಮ್ಮ ಮತದಲ್ಲೂ ಇದೇ ಸಾರ ಆದರೆ ಇದಕ್ಕೆ ಹಿಂದೆ ' ದಾ ' ಎಂಬ ಅಕ್ಷರವನ್ನು ಮಾತ್ರ ಸೇರಿಸಿಕೊಳ್ಳ ಬೇಕು ಎಂದು ಉಪದೇಶಿಸಿದರು. ಇದನ್ನು ಕೇಳಿದ ಅದ್ವೈತಾಚಾರ್ಯರು ನಮ್ಮ ಮತವೂ ಇಷ್ಟೇ. ಆದರೆ ದಾಸೋಹಂ ಎಂಬ ಮಾತಿಗೆ ಮೊದಲು ' ಸ ' ಎಂಬ ಅಕ್ಷರವನ್ನು ಸೇರಿಸಿಕೊಳ್ಳಬೇಕು ಎಂದರು. ಮತ್ತೆ ಶ್ರೀವೈಷ್ಣವಾ ಚಾರ್ಯರು ' ಸದಾಸೋಹಂ ' ಎಂಬ ಮಾತಿಗೆ ಮೊದಲು ' ದಾ ' ಎಂಬ ಅಕ್ಷರ ಸೇರಿಸಿಕೊಂಡಾಗ ವಿಶಿಷ್ಟಾದ್ವೈತ ಮತ ಸಾರವು ದೊರೆಯತ್ತದೆ ಎಂದು ಉಪದೇಶಿಸಿದರು. ಭಗವಂತನ ದಾಸರಿಗೆ ದಾಸರಾಗುವುದೇ ಈ ದರ್ಶನದ ಪರಮಧ್ಯೇಯ. ಆದ್ದರಿಂದಲೇ ನಮ್ಮಾಳ್ವಾರರು ಅಡಿಯಾರ್ ಅಡಿಯಾರ್ ತಮ್ಮಡಿಯಾರ್ ಅಡಿಯಾರ್ ತಮಕ್ಕಡಿಯಾರ್ ಅಡಿಯಾರ್ ಎಂದು ಪರಮ ದಾಸ್ಯವನ್ನು ತಮ್ಮ ಗ್ರಂಥಗಳಲ್ಲಿ ಪ್ರತಿಪಾದಿಸಿದ್ದಾರೆ ಅವರ ಪಾದಕಮಲ ಗಳನ್ನು ಆಶ್ರಯಿಸಿದ ರಾಮಾನುಜಾಚಾರ್ಯರೂ " ದಾಸಭೂತಾಸ್ಸ್ವತಸ್ಸ ರ್ವೇಹ್ಯಾತ್ಮಾನಃ ಪರಮಾತ್ಮನಃ " ಎಂಬ ಭಗವದ್ವಾಕ್ಯವನ್ನು ಪುಷ್ಟೀಕರಿಸಿದರು.

ಆಚಾರ್ಯ ಹೃದಯವೆಂಬ ಮಹಾಗ್ರಂಥವನ್ನು ರಚಿಸಿರುವ ಅಳಹಿಯ ಮಣವಾಳಪ್ಪೆರುಮಾಳ್ ನಾಯನಾರ್ ಅವರು ಅತಿಸುಂದರವಾದ ಒಂದು ಶ್ರೀಸೂಕ್ತಿಯಲ್ಲಿ ಆಚಾರ್ಯ ರಾಮಾನುಜರನ್ನು ಕೊಂಡಾಡಿದ್ದಾರೆ.

**ಆಧಿತ್ಯರಾಮದಿವಾಕರ ಅಚ್ಯುತ ಭಾನುಕ್ಕಳುಕ್ಕು ಪೋಹಾದ ಉಳ್ಳಿರುಳ್ ನೀಂಗಿ ಶೋಷಿಯಾದ ಪಿರವಿಕ್ಕಡಲ್‌ವತ್ತಿ ವಿಕಸಿಯಾದ ಪೋದಿಲ್ ಕಮಲಂಮಲರ್‌ನ್ದದು ವಕುಳಾ ಭರಣ ಕಲಿಧ್ವಂಸ ರಾಮಾನುಜ ಭಾಸ್ಕರೋದಯತ್ತಿಲೇ**

ಯೆಂದಿದ್ದಾರೆ ಅವರು. ಇದರಲ್ಲಿ ಕಲಿಧ್ವಂಸ ರಾಮಾನುಜ ಭಾಸ್ಕರೋದಯ ತ್ತಿಲೇ ಎಂಬ ಭಾಗವನ್ನು ನಾನು ಸೇರಿಸಿಕೊಂಡಿದ್ದೇನೆ.

ಮೇಲಿನ ಆಚಾರ್ಯಹೃದಯ ಶ್ರೀಸೂಕ್ತಿಯಲ್ಲಿ ಮೂವರು ಸೂರ್ಯರ ಉದಯವನ್ನು ವರ್ಣಿಸಲಾಗಿದೆ. ಅದರಲ್ಲಿ ಮೊದಲನೆಯವನು ಪ್ರತಿದಿನವೂ ಉದಯಿಸುವ ಸೂರ್ಯ.

ಪ್ರತಿದಿನವೂ ಸೂರ್ಯನು ಆಕಾಶದಲ್ಲಿ ಉದಯಿಸುತ್ತಾನೆ. ಅವನ ಉದಯವಾದಾಗ ಕೇವಲ ಬಾಹ್ಯವಾದ ಅಂಧಕಾರವು ತೊಲಗುವುದು. ಒಳಗಿರುವ ಅಂಧಕಾರವು ಯಾವಾಗಲೂ ತೊಲಗಲಾರದು. ಆದ್ದರಿಂದಲೇ ಹಿರಿಯರು—

**ಬಾಹ್ಯಂತು ತಮೋ ನಶ್ಯೇತ್ ಪಾವಕಾದಿತ್ಯ ಸನ್ನಿಧೌ ।**
**ಬಾಹ್ಯಮಾಭ್ಯಂತರಂ ಚೈವ ವಿಷ್ಣುಭಕ್ತಾಗ್ರ ಸನ್ನಿಧೌ ॥**

ಎಂದಿದ್ದಾರೆ.

(ಕೇವಲ ಬಾಹ್ಯವಾದ ಕತ್ತಲೆಯು ಅಗ್ನಿ ಮತ್ತು ಸೂರ್ಯರ ಸಾನ್ನಿಧ್ಯದಿಂದ ತೊಲಗುವುದು. ಆದರೆ ಬಾಹ್ಯವೂ ಮತ್ತು ಆಂತರವೂ ಆದ ಅಂಧಕಾರವು ವಿಷ್ಣುಭಕ್ತಾಗ್ರೇಸರರ ಸಾನ್ನಿಧ್ಯದಿಂದ ತೊಲಗುವುದು.)

ಎರಡನೆಯ ಸೂರ್ಯ ರಾಮದಿವಾಕರ. ಶ್ರೀ ರಾಮಾಯಣದಲ್ಲಿನ ಸಂದರ್ಭ : ಆಂಜನೇಯನು ಅಶೋಕವನದಲ್ಲಿ ಸೀತೆಯನ್ನು ನಮಿಸಿ " ನಾನು ನಿನ್ನನ್ನು ರಾಮನ ಸಾನ್ನಿಧ್ಯಕ್ಕೆ ಕೊಂಡೊಯ್ಯುವೆನು ನೀನು ನನ್ನ ಜೊತೆಯ ನಡೆ " ಎಂದು ಪ್ರಾರ್ಥಿಸಿದಾಗ ಸೀತೆಯು ಹೇಳುತ್ತಾಳೆ—

**ಶರಜಾಲಾಂಶುಮಾನ್ ಶೂರಃ ಕಪೇ ರಾಮದಿವಾಕರಃ ।**
**ಶತ್ರುರಕ್ಷೋಮಯಂತೋಯಂ ಉಪಶೋಷಂ ನಯಿಷ್ಯತಿ**

ನಾನು ನಿನ್ನ ಜೊತೆಯಲ್ಲಿ ಬರಲಾರೆ. ಶ್ರೀರಾಮನೆಂಬ ಸೂರ್ಯನು ಉದಯಿಸುತ್ತಾನೆ. ಅವನಿಗೆ ಬಾಣಗಳ ಸಮೂಹವೇ ಕಿರಣಗಳು. ಅಂತಹ ಕಿರಣಗಳಿಂದ ಶತ್ರುಗಳಾದ ರಾಕ್ಷಸರೆಂಬ ನೀರನ್ನು ಬತ್ತುವಂತೆ ಅವನು ಮಾಡುತ್ತಾನೆ. ಆಗ ನನಗೆ ವಿಮೋಚನವೇರ್ಪಡುವುದು. ಇಂತಹ ರಾಮದಿವಾಕರನ ಉದಯವಾದರೂ ಭೂಲೋಕದಲ್ಲಿರುವ ಸಮಸ್ತಪ್ರಜೆಗಳ ಅಜ್ಞಾನಾಂಧಕಾರವು ತೊಲಗಿ ಅವರೆಲ್ಲರಿಗೂ ಮೋಕ್ಷಪ್ರಾಪ್ತಿಯಾಗಲಿಲ್ಲ. " ನಲ್ಪಾಲ್ ಅಯೋತ್ತಿಯಿಲ್ ವಾಳುಂ ಶರಾಶರಂ ಮುತ್ತವುಂ " ಎಂದು ಹೇಳುವಂತೆ ಅಯೋಧ್ಯೆಯಲ್ಲಿರುವ ಚರಾಚರಗಳಿಗೆ ಮಾತ್ರ ಮೋಕ್ಷಪ್ರಾಪ್ತಿ.

ಮೂರನೆಯ ಸೂರ್ಯ—ಅಚ್ಯುತಭಾನು.

ತತೋಽಖಿಲಜಗತ್ಪದ್ಮಬೋಧಾಯ ಅಚ್ಯುತಭಾನುನಾ ।
ದೇವಕೀಪೂರ್ವಸಂಧ್ಯಾಯಾಂ ಆವಿರ್ಭೂತಂ
ಮಹಾತ್ಮನಾ ॥ (ವಿಷ್ಣುಪುರಾಣ)

ಸಮಸ್ತ ಲೋಕಗಳೂ ಒಂದು ಕಮಲ. ಈ ಕಮಲವು ಅರಳುವುದಕ್ಕಾಗಿ ಮಹಾತ್ಮನಾದ ಅಚ್ಯುತಭಾನುವು ದೇವಕೀ ಎಂಬ ಪೂರ್ವ ದಿಕ್ಕಿನಲ್ಲಿ ಅವತರಿಸಿದನು. ಈ ರೀತಿ ಅಚ್ಯುತಭಾನುವು ಅವತರಿಸಿದರೂ ಲೋಕದಲ್ಲಿರುವ ಸಮಸ್ತ ಪ್ರಜೆಗಳ ಹೃದಯಕಮಲವು ಅರಳಿತೇ ಎಂದು ವಿಮರ್ಶಿಸಿದಾಗ ಅಚ್ಯುತಭಾನುವೆಂದು ಕೊಂಡಾಡಲ್ಪಟ್ಟಿರುವ ಕೃಷ್ಣನ ಮಾತುಗಳಿಂದಲೇ ತಿಳಿಯಬಹುದು.

ಅವಜಾನಂತಿ ಮಾಂ ಮೂಢಾಃ ಮಾನುಷೀಂ
ತನುಮಾಶ್ರಿತಂ ।
ಪರಂಭಾವಮಜಾನಂತಃ ಮಮ ಭೂತಮಹೇಶ್ವರಂ ॥

ಪರಾತ್ಪರವಸ್ತುವಾದ ನಾನು ಈ ಭೂಲೋಕದ ಜನರಿಗಾಗಿ ಮನುಷ್ಯ ಶರೀರವನ್ನು ಪರಿಗ್ರಹಿಸಿದೆ. ಆದರೆ ನನ್ನ ಪರತ್ವವನ್ನು ತಿಳಿಯದ ಮೂರ್ಖರಾದ ಈ ಜನರು ನನ್ನನ್ನು ಗೌರವಿಸದೆ ಅವಮಾನ ಮಾಡುತ್ತಾರೆಂದು ದುಃಖಿಸುತ್ತಲೇ ಈ ಲೋಕವನ್ನು ಬಿಟ್ಟು ತೆರಳಿದ ಕೃಷ್ಣ. ಆದ್ದರಿಂದ ಈ ಮೂವರು ಸೂರ್ಯರು ಉದಯಿಸಿದರೂ ಅಂಧಕಾರವು ಪೂರ್ಣವಾಗಿ ತೊಲಗಲಿಲ್ಲ. ಸಂಸಾರ ಸಾಗರವು ಬತ್ತಲಿಲ್ಲ, ಹೃದಯ ಕಮಲವು ಅರಳಲಿಲ್ಲ. ಆದರೆ ವಕುಳಾಭರಣರಾದ ನಮ್ಮಾಳ್ವಾರ್, ಕಲಿಧ್ವಂಸಮಾಡಿದ ತಿರುಮಂಗೈಯಾಳ್ವಾರ್ ಮತ್ತು ರಾಮಾನುಜರು, ಈ ಮೂವರು ಸೂರ್ಯರು ಉದಯಿಸಿದಾಗ ಇವೆಲ್ಲ ಸಾಧ್ಯವಾದುವು.

ಮೊದಲನೆಯದಾಗಿ ವಕುಳಾಭರಣ ಭಾಸ್ಕರೋದಯ :

ಯದ್ಗೋಃ ಸಹಸ್ರಮಪಹಂತಿ ತಮಾಂಸಿ ಪುಂಸಾಂ ।
ನಾರಾಯಣೋ ವಸತಿಯತ್ರ ಸಶಂಖಚಕ್ರಃ ॥

**ಯನ್ಮಂಡಲಂ ಶ್ರುತಿಗತಂ ಪ್ರಣಮಂತಿ ವಿಪ್ರಾಃ ।**
**ತಸ್ಮೈ ನಮೋ ವಕುಳಭೂಷಣಭಾಸ್ಕರಾಯ ॥**

ಎಂದು ಪೂರ್ವಾಚಾರ್ಯರು ನಮ್ಮಾಳ್ವಾರರನ್ನು ನಮಿಸಿದ್ದಾರೆ.
ಪ್ರಸಿದ್ಧನಾದ ಸೂರ್ಯನ ಉದಯವಾದಾಗ ತೊಲಗದಿದ್ದ ಅಜ್ಞಾನಾಂಧಕಾರವು ನಮ್ಮಾಳ್ವಾರರು ಅವತರಿಸಿದೊಡನೆಯೇ ನಿರ್ನಾಮವಾಯಿತು.
ಇದರಂತೆ ತಿರುಮಂಗೈಯಾಳ್ವಾರರೆಂಬ ಸೂರ್ಯನ ಉದಯವಾದಾಗಲೂ ಅವಿದ್ಯೆಯೆಂಬ ಅಂಧಕಾರವು ತೊಲಗಿತು.

**ಕಲಯಾಮಿ ಕಲಿಧ್ವಂಸಂ ಕವಿಂ ಲೋಕದಿವಾಕರಂ**
**ಯಸ್ಯ ಗೋಭಿಃ ಪ್ರಕಾಶಾಭಿಃ ಆವಿದ್ಯಂ ನಿಹತಂ ತಮಃ**

ಎಂದಲ್ಲವೇ ಹಿರಿಯರು ಕೊಂಡಾಡುತ್ತಾರೆ. ಆದ್ದರಿಂದ ಪ್ರಸಿದ್ಧ ಸೂರ್ಯನಾಗಲೀ ರಾಮದಿವಾಕರನಾಗಲೀ ಮಾಡಲಾರದ ಕಾರ್ಯವನ್ನು ಇವರು ಸಾಧಿಸಿದರು.

ಮೂರನೆಯ ಸೂರ್ಯ—ರಾಮಾನುಜ ದಿವಾಕರ.

**ಪುಣ್ಯಾಂಭೋಜ ವಿಕಾಸಾಯ ಪಾಪಧ್ವಾಂತ**
**ಕ್ಷಯಾಯ ಚ ।**
**ಶ್ರೀಮಾನ್ ಆವಿರಭೂದ್ಭೂಮೌ ರಾಮಾನುಜ**
**ದಿವಾಕರಃ ॥**

ಪುಣ್ಯವೆಂಬ ಕಮಲವು ಅರಳುವುದಕ್ಕಾಗಿಯೂ ಪಾಪವೆಂಬ ಅಂಧಕಾರವು ತೊಲಗುವುದಕ್ಕಾಗಿಯೂ ಶ್ರೀ ರಾಮಾನುಜದಿವಾಕರರು ಭೂಲೋಕದಲ್ಲಿ ಅವತರಿಸಿದರು. ಮೇಲಿನ ಶ್ಲೋಕಗಳಿಂದ ಪರಾಂಕುಶ ಪರಕಾಲ ಮತ್ತು ಯತಿವರರೆಂಬ ಮೂವರು ಸೂರ್ಯರಿಂದ, ಪ್ರಸಿದ್ಧರಾದ ಮೂವರು ಸೂರ್ಯರು ನೆರವೇರಿಸಲಾಗದ ಆಭ್ಯಂತರಾಂಧಕಾರದ ನಾಶ, ಸಂಸಾರ ಸಾಗರವನ್ನು ಬತ್ತಿಸುವುದು ಮತ್ತು ಹೃದಯ ಕಮಲದ ಅರಳುವಿಕೆಯೆಂಬ ಮೂರು ಕೆಲಸಗಳೂ ಸುಗಮವಾಗಿ ನೆರವೇರಿದುವು. ಆದ್ದರಿಂದ ಆ ಆದಿತ್ಯತ್ರಯಕ್ಕಿಂತ ಈ ಆಚಾರ್ಯತ್ರಯರೇ ಉತ್ತಮರೆಂಬ ವಿಷಯದಲ್ಲಿ ಸಂದೇಹವೇ ಇಲ್ಲ.

ಆಚಾರ್ಯ ರಾಮಾನುಜರ ಅವತಾರವಾದ ನಂತರ ಕಲಿಗೆ ಸ್ಥಾನವೇ ಇಲ್ಲ ಆದ್ದರಿಂದಲೇ ಇದನ್ನು ನಮ್ಮಾಳ್ವಾರರು "ಕಲಿಯುಂ ಕೆಡುಂ ಕಂಡು ಕೊಳ್ಳಿರ್" ಎಂದು ಹಿಂದೆಯೇ ಸೂಚಿಸಿದರು.

ಈ ಭೂಲೋಕವಲ್ಲಿರುವ ಜನರೆಲ್ಲರೂ ಪರಮಾತ್ಮನ ಸಾನ್ನಿಧ್ಯವನ್ನು ಪಡೆಯಲು ಸುಲಭವಾದ ಮಾರ್ಗವನ್ನು ತೋರಿಸಿ ಕೊಟ್ಟವರು ಆಚಾರ್ಯ ರಾಮಾನುಜರು. ಸಂಸಾರ ಸಾಗರದಲ್ಲಿ ತೊಳಲುವ ಜೀವಾತ್ಮರ ವಿಷಯದಲ್ಲಿ ಅವರಿಗೆ ಅಪಾರವಾದ ಕೃಪೆ. ಆದ್ದರಿಂದಲೇ ಮಹಾತ್ಮರು ಅವರ ಕರುಣೆಯನ್ನು ವಿಶೇಷವಾಗಿ ಕೊಂಡಾಡುತ್ತಾರೆ. ತಿರುವರಂಗತ್ತಮುದನಾರ್ ಎಂಬ ಆಚಾರ್ಯರು ರಾಮಾನುಜರನ್ನು "ಪಾಮನನ್ ಶೀರ್ಲ" ವಾಮನನಂತೆ ಕರುಣೆಯುಳ್ಳವರು ಎಂದು ಕೊಂಡಾಡಿದ್ದಾರೆ. ಈ ಭೂಲೋಕದಲ್ಲಿ ನಾಲ್ಕು ವಿಧವಾದ ವ್ಯಕ್ತಿಗಳನ್ನು ನಾವು ಕಾಣಬಹುದು. ಉತ್ತಮ, ಮಧ್ಯಮ, ಅಧಮ ಮತ್ತು ಅಧಮಾಧಮ. ಉತ್ತಮನಾದವನು ತನ್ನ ಸರ್ವನಾಶವಾದರೂ ಮತ್ತೊಬ್ಬರಿಗೆ ಉಜ್ಜೀವನ ಉಂಟಾಗಬೇಕೆಂದು ಪ್ರಯತ್ನಿಸುತ್ತಾನೆ, ಮಧ್ಯಮನು ತಾನೂ ಬಾಳಬೇಕು ಮತ್ತೊಬ್ಬನೂ ಬಾಳಬೇಕೆಂಬ ಧ್ಯೇಯ ಉಳ್ಳವನು, ಅಧಮನು ಮತ್ತೊಬ್ಬನನ್ನು ನಾಶಮಾಡಿ ತಾನು ಬಾಳುವನು, ಅಧಮಾಧಮನು ತಾನೂ ಬಾಳದೆ ಮತ್ತೊಬ್ಬರ ಬದುಕನ್ನೂ ನಾಶಮಾಡುವನು.

**ಸೂಕ್ಷ್ಮೀಭೂಯ ಸ್ವಯಮಪಿ ಪರಾನಂದ**
**ದಶ್ಚಂದನದ್ರುಃ ।**
**ಧೇನುರ್ದತ್ತೇ ರಸಮನುದಿನಂ ದತ್ತಘಾಸಾನುರೂಪಂ ॥**
**ಹತ್ವಾಮಾತ್ಯರುದಯಮಯತೇ ಹಾಸ್ಯಯಂ**
**ವೃಶ್ಚಿಕಾದಿಃ ।**
**ಮೃತ್ವಾಪ್ಯನ್ಯಂ ಪಮಯತಿಮಹುಃ ಮಕ್ಷಿಕಃ**
**ಕುಕ್ಷಿಗಾಮೀ ॥**

ಗಂಧದ ಮರವು ತನ್ನನ್ನು ತಾನೇ ಸವೆಸಿಕೊಂಡು ಸೂಕ್ಷ್ಮವಾದ ಕಣಗಳಾಗಿ ಮತ್ತೊಬ್ಬರಿಗೆ ಆನಂದವನ್ನು ಕೊಡುತ್ತದೆ. ಅದರಂತೆ ಉತ್ತಮನೂ ತನಗೆ ಎಷ್ಟೇ ಕಷ್ಟಗಳು ಬಂದರೂ ಮತ್ತೊಬ್ಬರ ಸುಖಕ್ಕೋಸ್ಕರ ಅನವರತವೂ

ರ್ವಿಸುತ್ತಾನೆ. ಹಸುವು ನಾವು ಕೊಟ್ಟ ಆಹಾರಕ್ಕೆ ಅನುಗುಣವಾಗಿ ಹಾಲನು ಕರೆಯುತ್ತದೆ. ಮಧ್ಯಮನೂ ಇದರಂತೆ ತಾನೂ ಬದುಕಬೇಕು ಮತ್ತೊಬ್ಬರೂ ಬದುಕಬೇಕೆಂದು ಇಚ್ಛೆಯುಳ್ಳವನ . ಚೇಳಿನ ಮರಿಗಳು ತಮ್ಮ ತಾಯಿಯ ಹೊಟ್ಟೆಯನ್ನು ಸೀಳಿಕೊಂಡು ಜನ್ಮತಾಳುತ್ತವೆ. ತಾವು ಹುಟ್ಟುವಾಗ ತಾಯಿ ಯನ್ನು ನಾಶಮಾಡಿಯೇ ಇವು ಜನಿಸುತ್ತವೆ. ಅಧಮನು ತಾನು ಬದುಕಲು ಮತ್ತೊಬ್ಬರ ನಾಶಕ್ಕೆ ಸಿದ್ಧವಾಗಿಯೇ ಇರುತ್ತಾನೆ. ನೊಣವು ಅಧಮಾಧಮ ನಂತೆ. ನಾವು ಬಾಯಿ ಬಿಟ್ಟುಕೊಂಡಿರುವಾಗ ನಮ್ಮ ಶರೀರದೊಳಕ್ಕೆ ಪ್ರವೇಶಿಸು ತ್ತದೆ. ಪ್ರವೇಶಿಸಿದ ಸ್ವಲ್ಪಕಾಲದಲ್ಲಿ ತಾನು ಪ್ರಾಣತ್ಯಾಗಮಾಡುತ್ತದೆ. ಆದರ ನಮಗೆ ಹಿಂಸೆಯನ್ನು ಉಂಟುಮಾಡಿ ವಾಂತಿಯಾಗುವಂತೆ ಮಾಡುತ್ತದೆ. ಹೀಗೆ ತಾನೂ ಬದುಕದೆ ಪರರನ್ನೂ ಹಿಂಸಿಸುವವನು ಅಧಮಾಧಮ.

ರಾಮಾನುಜಾಚಾರ್ಯರು ಉತ್ತಮರ ಪಂಕ್ತಿಗೆ ಸೇರಿದವರು. ಅವರ ತಂಗಿಯೆಂದು ಪ್ರಸಿದ್ಧಿಪಡೆದ ಗೋದಾದೇವಿಯು "ಓಂಗಿ ಉಲಹಳನ್ದ ಉತ್ತಮನ್" ಎಂದು ವಾಮನಾವತಾರವನ್ನು ಕೊಂಡಾಡಿದ್ದಾಳೆ. ಇಂತಹ ವಾಮನನ ಗುಣಗಳೆಲ್ಲವೂ ಆಚಾರ್ಯ ರಾಮಾನುಜರಲ್ಲಿ ಮೂರ್ತೀಭವಿಸಿವೆ. ಪರಮಭಕ್ತನಾದ ಬಲಿಚಕ್ರವರ್ತಿಯ ಔದಾರ್ಯವನ್ನು ಪುರಸ್ಕರಿಸಬೇಕು. ತನ್ನ ಅನುಯಾಯಿಯಾದ ಇಂದ್ರನಿಗೆ ಸಾಮ್ರಾಜ್ಯವನ್ನೂ ದೊರಕಿಸಬೇಕು ಇದಕ್ಕೋಸ್ಕರ ಪರಾತ್ಪರವಸ್ತುವಾದ ಶ್ರೀಮನ್ನಾರಾಯಣನು ಯಾಚಕ ನಾದನು. ದೈತ್ಯೌದಾರ್ಯ ಇಂದ್ರಯಾಞ್ಚಾವಿಹತಿಮಪನಯನ್ ವಾಮನಃ ಅರ್ಥೀತ್ವಮಾಸೀಃ ಎಂದಲ್ಲವೇ ಪರಾಶರಭಟ್ಟರ ಶ್ರೀಸೂಕ್ತಿ.

ಆಳ್ವಾರರೂ ಕೂಡ—

"ಮದಿಯಿನಾಲ್ ಕುರಳ್ ಮಾಣಾಯ್ ಉಲಿಹಿರಂದ ಕಳ್ವರ್ಕ್ಕ" ಎಂದಿದ್ದಾರೆ ಈ ರೀತಿ ಮತ್ತೊಬ್ಬನು ಬದುಕಿ ಬಾಳುವಂತೆ ಮಾಡಲು (ಚತು ರ್ಣಾಂ ಪುರುಷಾರ್ಥಾನಾಂ ದಾತಾದೇವಶ್ಚತುರ್ಭುಜಃ) ನಾಲ್ಕು ಪುರುಷಾರ್ಥ ಗಳನ್ನೂ ನಾಲ್ಕು ಕೈಗಳಿಂದ ಅನವರತವೂ ಕೊಡುತ್ತಿರುವ ಔದಾರ್ಯ ಮಹೋದಧಿಯಾದ ನಾರಾಯಣನು ತಾನು ಯಾಚಕನಾದನಲ್ಲವೇ, ಹೀಗೆ

ಯಾಚಕನಾದಾಗ ಪರಮಾತ್ಮನ ಶರೀರವು ಸಂಕುಚಿತವಾಯಿತು. ಕಾರಣ ವೇನು? ಇವನೆಂದೂ ಭಿಕ್ಷೆ ಬೇಡಿದವನಲ್ಲ. ಮೊದಲನೆಯ ಸಲ ಭಿಕ್ಷ ಬೇಡುವಾಗ ಯಾರಿಗಾದರೂ ಮಾತುಹೊರಡದು, ಶರೀರವೂ ಸಂಕೋಚ ದಿಂದ ಕುಗ್ಗುತ್ತದೆ. ಆದ್ದರಿಂದಲೇ ಒಬ್ಬ ಕವಿಯು ಯಾಚಕನನ್ನು ತೃಣ ಕ್ಕಿಂತ ಕಡೆಯೆಂದಿದ್ದಾನೆ.

**ತೃಣಾಲ್ಲಘುತರಸ್ತೂಲಃ ತೂಲಾದಪಿಚ ಯಾಚಕಃ**
**ವಾಯುನಾ ಕಿಂನನೀತೋಽಸೌ ಮಾಮಯಂ ಪ್ರಾರ್ಥ**
**ಯೇದಿರೆ**

ತೃಣಕ್ಕಿಂತ ಹಗುರವಾದದ್ದು ಹತ್ತಿ, ಹತ್ತಿಗಿಂತ ಹಗುರ ಯಾಚಕ. ಆದರೆ ಯಾಚಕನನ್ನು ವಾಯುವು ಏಕೆ ಹಾರಿಸಿಕೊಂಡು ಹೋಗಲಿಲ್ಲ? "ಇವನನ್ನು ಹಾರಿಸಿಕೊಂಡುಹೋದರೆ ನನ್ನಲ್ಲೇ ಭಿಕ್ಷೆಬೇಡುತ್ತಾನೆ" ಎಂಬ ಹೆದರಿಕೆ ಯಿಂದಲೇ ಇರಬೇಕು. ಇಂತಹ ಕೀಳಮಟ್ಟದ ಕೃತ್ಯಕ್ಕೆ ಪರಮಾತ್ಮನು ಇಳಿ ದದ್ದು ತನ್ನ ಭಕ್ತರಿಗೋಸ್ಕರ. ವಾಮನನಿಗೆ ಬಲಿಚಕ್ರವರ್ತಿಯು ದಾನಕೊಡಲು ಸಿದ್ಧನಾದಾಗ ಶುಕ್ರಾಚಾರ್ಯನು ಇವನು ಸಾಕ್ಷಾತ್ ಶ್ರೀಮನ್ನಾರಾಯಣ ನಿನ್ನ ಸಾಮ್ರಾಜ್ಯವನ್ನು ಅಪಹರಿಸಲು ಬಂದಿದ್ದಾನೆ ಜಾಗ್ರತೆಯಾಗಿರು ಎಂದಾಗ ಬಲಿಯು ಉದ್ಗರಿಸುವ ಮಾತು ಅತಿಸುಂದರ:

**ನಿನ್ನೈಕ್ಕೀಳ್ತ್ತೈ ಎರ್ ಕೈ ನಿಮಿರ್ನ್ದಿಡವಂದು**
**ತಸಕ್ಕಿಯಲಾವಿಹ್ಗೆ ಗನಕ್ಕರಿಯಾನದು ಕೈತ್ತಲಂ**
**ತಾಳ್ಳವದು ತಾಳ್ಕೊಲೆನ್ರು ಎನಕ್ಕಿದನ್ಮೇಲ್ ಯಾದ್ರು**
**ಕೊಲೆನ್ರಾ್**

ಸಾಕ್ಷಾತ್ಪರವಸ್ತುವಾದ ಶ್ರೀಮನ್ನಾರಾಯಣಯನು ಯಾಚಿಸಿ ಬಂದಾಗ ಅವನ ಕೈ ಕೆಳಗೆ, ನನ್ನ ಕೈ ಮೇಲೆ. ಇದಕ್ಕಿಂತ ನನಗೆ ಒಳ್ಳೆಯದಾವುದಿದೆ ಎಂದ. ಇವೆಲ್ಲವೂ ಪರಮಾತ್ಮನಿಗೆ ಭಕ್ತರಲ್ಲಿರುವ ಅಪಾರವಾದ ಕರುಣೆಯನ್ನು ತೋರಿ ಸುತ್ತದೆ. ಇದರಂತೆ ರಾಮಾನುಜಾಚಾರ್ಯರು ಸಂಸಾರ ಸಾಗರದಲ್ಲಿ ಸಿಕ್ಕಿ ತೊಳಲುತ್ತಿರುವ ಚೇತನರನ್ನು ಉದ್ಧರಿಸುವುದಕ್ಕೋಸ್ಕರ ಯಾವ ಕಷ್ಟವನ್ನೂ ಅನುಭವಿಸಲು ಸಿದ್ಧರಾಗಿದ್ದರು ಆದ್ದರಿಂದಲೇ ವೇದಾಂತದೇಶಿಕರು ಇವರನ್ನು-

" ಇನ್ನರುಳಾಲ್ ಪೆರುಂಬೂದೂರ್ ವಂದವಳ್ಳರ್ " ಎಂದರು. ' ಅಸ್ಮದ್ಗುರೋಭಗವತೋಸ್ಯದಯೈಕ ಸಿಂಧೋ ' ಎಂದು ನಾವು ಪ್ರತಿದಿನವೂ ಅವರನ್ನು ಸ್ಮರಿಸುತ್ತೇವೆ.

ಆಚಾರ್ಯ ರಾಮನುಜರ ಅಪಾರವಾದ ದಯೆಯನ್ನು. ಅವರ ಜೀವನದಲ್ಲಿ ನಡೆದ ಒಂದು ಘಟನೆಯಿಂದ ಉದಹರಿಸಬಹುದು. ರಹಸ್ಯಾರ್ಥಗಳ ಉಪದೇಶ ವನ್ನು ಪಡೆಯುವುದಕ್ಕಾಗಿ ಅವರು ' ತಿರುಕ್ಕೋಟ್ಟಿಯೂರ್ ನಂಬಿ ' ಯವರನ್ನು ಪ್ರಾರ್ಥಿಸಿದರು. ನಂಬಿಯವರು ತಕ್ಷಣವೇ ರಹಸ್ಯಾರ್ಥಗಳನ್ನು ಉಪದೇಶಿಸ ಲಿಲ್ಲ ' ಪರಮರಹಸ್ಯವಾದ ' ಈ ಅರ್ಥಗಳನ್ನು ಪಡೆಯಲು ರಾಮಾನುಜರು ಶ್ರೀರಂಗದಿಂದ ಗೋಷ್ಠೀಪುರಕ್ಕೆ 18 ನಲ ಯಾತ್ರೆಯನ್ನು ಮಾಡಬೇಕಾಯಿತು. ಅನಂತರ ಗುರುಗಳು ಸಾರತಮವಾದ ಅರ್ಥವನ್ನು ಬಹಳ ಗೋಪ್ಯವಾಗಿ ರಾಮಾನುಜರಿಗೆ ಉಪದೇಶಿಸಿದರು. ಮೋಕ್ಷಸಾಮ್ರಾಜ್ಯವನ್ನು ಕೊಡುವ ಈ ಅರ್ಥಗಳನ್ನು ಅಪಾತ್ರರಿಗೆ ದಾನಮಾಡಿದಲ್ಲಿ ನರಕವು ತಪ್ಪದೆಂದು ಎಚ್ಚರಿಸಲು ಮರೆಯಲಿಲ್ಲ. ಉಪದೇಶವನ್ನು ಪಡೆದ ತಕ್ಷಣವೇ ರಾಮಾನುಜಾಚಾರ್ಯರು ಗೋಷ್ಠೀಪುರದ ಗೋಪುರವನ್ನೇರಿ ಆ ಊರಿನ ಜನಗಳಿಗೆ ಕೇಳುವಂತೆ ಈ ರಹಸ್ಯಾರ್ಥಗಳನ್ನು ಉಪದೇಶಿಸಿದರು. ಗೋಷ್ಠೀಪೂರ್ಣರ ಕೋಪಕ್ಕೆ ಮಿತಿ ಯಿಲ್ಲವಾಯಿತು. " ನನ್ನ ಆಜ್ಞೆಯನ್ನು ಮೀರಿ ಈ ರೀತಿ ರಹಸ್ಯಾರ್ಥೋಪದೇಶ ವನ್ನು ಮಾಡಿದ್ದರಿಂದ ದೊರೆಯುವ ಫಲವೇನು ಗೊತ್ತೇ ? " ಎಂದು ಪ್ರಶ್ನಿಸಿ ದಾಗ ರಾಮಾನುಜರು ಶಾಂತಚಿತ್ತರಾಗಿ ಕೊಟ್ಟ ಉತ್ತರ ' ನರಕ ' ಎಂದು. ಕ್ಷಣಕಾಲ ಆಚಾರ್ಯರು ಭ್ರಮಿಸಿದರು " ನರಕವೇ ಫಲ ಎಂದು ತಿಳಿದೂ ನೀನೇಕೆ ಹೀಗೆ ಉಪದೇಶಿಸಿದೆ " ಎಂದು ಪ್ರಶ್ನಿಸಿದಾಗ ದಯಾನಿಧಿಯಾದ ರಾಮಾನುಜರ ಮುಖಕಮಲದಿಂದ ಹೊರಟ ಉತ್ತರವಿದು. " ಈ ರಹಸ್ಯಾ ರ್ಥೋಪದೇಶದಿಂದ ಇಷ್ಟು ಜನರಿಗೂ ಮೋಕ್ಷವು ದೊರಕಿ ನನಗೊಬ್ಬನಿಗೆ ನರಕ ಉಂಟಾಗುವುದಾದರೆ, ಆ ನರಕಕ್ಕೆ ಹೋಗಲು ನಾನು ಸಿದ್ಧನಾಗಿದ್ದೇನೆ. " ಇಂತಹ ಪರಮಕೃಪಾಳು ಆಚಾರ್ಯ ರಾಮಾನುಜರು. ಭೂಲೋಕದಲ್ಲಿರುವ ಸಮಸ್ತ ಚರಾಚರಗಳನ್ನೂ ಪರಮ ಕೃಪಾಳುವಾದ ವಾಮನನು ತನ್ನ ಪಾದ ಪಂಕಜ ಸ್ಪರ್ಶದಿಂದ ಪಾವನಗೊಳಿಸಿದನು. ಅದರಂತೆಯೇ ಆಚಾರ್ಯ ರಾಮಾನುಜರು ಪರಮಕೃಪೆಯಿಂದ ತನಗುಂಟಾಗುವ ಹಾನಿಯನ್ನೂ ಕಡೆ

ಗಣಿಸಿ, ಸಂಸಾರ ಸಾಗರದಲ್ಲಿ ತೊಳಲುವ ಚೇತನೋಜ್ಜೀವನಾರ್ಥವಾಗಿ ಶ್ರಮಿಸಿದರು. ಆದ್ದರಿಂದಲೇ ಅಮುದನಾರ್ ಅವರು ರಾಮಾನುಜರನ್ನು "ಪಾಮನ್ನ ಶೀಲನ್" ಎಂದು ಕೊಂಡಾಡಿದರು. 'ಅಟಿಪಿಯ ಮಣವಾಳ ಪ್ಪೆರುಮಾಳ್ ನಾಯನಾರ್' ಅವರು ಒಂದು ಸುಂದರವಾದ ಶ್ರೀಸೂಕ್ತಿಯಲ್ಲಿ ಆಚಾರ್ಯರನ್ನು ಕೊಂಡಾಡಿದರು— "ತಾಯಿಕ್ಕುಂ ಮಹನುಕ್ಕುಂ ತಂಬಿಕ್ಕುಂ ಇವರ್ಕ್ಕುಂ ಇವರಡಿ ಪಣಿನ್ದವರ್ಕ್ಕುಮೇ ಇರೇ ಇದು ಉಳ್ಳದು" ಮತ್ತೊಬ್ಬರ ಅನರ್ಥವನ್ನು ಕಂಡಾಗ ಸಹಿಸಲಾರದ ಸ್ಥಿತಿ ತಾಯಿಯಾದ ಸೀತಾದೇವಿಗೆ, ಪ್ರಹ್ಲಾದನಿಗೆ, ವಿಭೀಷಣನಿಗೆ, ಪರಾಂಕುಶ (ನಮ್ಮಾಳ್ವಾರ್) ರಿಗೆ ಮತ್ತು ಇವರ ಪಾದ ಕಮಲಗಳನ್ನು ಆಶ್ರಯಿಸಿದ ಆಚಾರ್ಯ ರಾಮಾನುಜರಿಗೆ ಮಾತ್ರ ಇದೆ.

ಅಶೋಕವನದಲ್ಲಿ ತನ್ನನ್ನು ಸೆರೆಯಲ್ಲಿಟ್ಟ ರಾವಣನಿಗೂ ಹಿತವನ್ನು ಉಪದೇಶಿಸಿದವಳು ದಯಾಮಯಿಯಾದ ಸೀತಾಮಾತೆ.

**ಮಿತ್ರಮೌಪಯಿಕಂ ಕರ್ತುಂ ರಾಮಸ್ಥಾನಂ ಪರೀಪ್ಸತಾ**
**ವಧಂಚ ಅನೀಪ್ಸತಾ ಘೋರಂ ತ್ವಯಾಸೌ ಪುರುಷರ್ಷಭಃ**
**ವಿದಿತಸ್ಸಹಿ ಸರ್ವಜ್ಞಃ ಶರಣಾಗತ ವತ್ಸಲಃ**
**ತೇನ ಮೈತ್ರೀ ಭವತುತೇ ಯದಿಜೀವಿತುಮಿಚ್ಛಸಿ**

ಎಂದು ಎಷ್ಟು ವಿಧವಾಗಿ ದುಷ್ಟನಾದ ರಾವಣನಿಗೆ ಉಪದೇಶಿಸಿದಳು. ರಾವಣ ಸಂಹಾರವಾದನಂತರ ಸೀತೆಯನ್ನು ಹಿಂಸಿಸಿದ ರಾಕ್ಷಸಿಯರನ್ನು ಚಿತ್ರವಧ ಮಾಡಬೇಕೆಂದು ಆಂಜನೇಯನು ತಿಳಿಸಿದಾಗ.

**ಪಾಪಾನಾಂ ವಾ ಶುಭಾನಾಂ ವಾ ವಧಾರ್ಹಾಣಾಂ ಪ್ಲವಂಗಮ**
**ಕಾರ್ಯಂ ಕರುಣಮಾರ್ಯೇಣ ನಕಶ್ಚಿನ್ನಾಪರಾಧ್ಯತಿ**

'ಪಾಪಿಗಳೇ ಆಗಲಿ, ಪುಣ್ಯವಂತರೇ ಆಗಲಿ ಅಥವಾ ವಧಾರ್ಹರೇ ಆಗಲಿ ಅವರ ವಿಷಯದಲ್ಲಿ ಕರುಣೆಯನ್ನು ತೋರಬೇಕು. ಈ ಪ್ರಪಂಚದಲ್ಲಿ ಅಪರಾಧ ಮಾಡದಿರುವವರು ಯಾರೂ ಇಲ್ಲ' ಎಂದು ಉಪದೇಶಿಸಿದಳು ಸಕಲ

ಜಗನ್ಮಾತೆಯಾದ ಜಾನಕಿ. ಆದ್ದರಿಂದಲೇ ಪರಾಶರ ಭಟ್ಟರು " ಓ ಮಾತೆ ! ಜಾನಕಿ! ನಿನ್ನ ಗೋಷ್ಠಿಯಿಂದ ರಾಮನ ಗೋಷ್ಠಿಯು ಚಿಕ್ಕದಾಗಿ ಮಾಡಲ್ಪಟ್ಟಿತು. " ಎಂದು ಕೊಂಡಾಡಿದ್ದಾರೆ (ಲಘುತರಾ ರಾಮಸ್ಯಗೋಷ್ಠೀಕೃತಾ) ಹೀಗೆಯೇ ಅಪಾರವಾದ ಕರುಣೆಯನ್ನು ತೋರಿಸಿದವನು ಪ್ರಹ್ಲಾದ. ಅವನ ತಂದೆಯಾದ ಹಿರಣ್ಯಕಶಿಪುವು ತನ್ನ ಮಗನನ್ನು ಎಲ್ಲ ವಿಧವಾಗಿಯೂ ಹಿಂಸಿಸಿದನು. ತನ್ನನ್ನೇ ಕೊಲ್ಲಬೇಕೆಂದಿದ್ದ ರಾಕ್ಷಸನೂ ಬಾಳಬೇಕೆಂಬ ಉದ್ದೇಶದಿಂದ ಪರಮ ದಯಾಮಯನಾದ ಪ್ರಹ್ಲಾದನು ಆ ರಾಕ್ಷಸನಿಗೆ ಉಪದೇಶಿಸುವ ರೀತಿ ಅತಿಸುಂದರ :

**ಸರ್ವಭೂತಾತ್ಮಕೇ ತಾತ ಜಗನ್ನಾಥೇ ಜಗನ್ಮಯೇ ।**
**ಪರಮಾತ್ಮನಿಗೋವಿಂದೇ ಮಿತ್ರಾಮಿತ್ರಕಥಾಕುತಃ ॥**

ಸರ್ವಭೂತಗಳಿಗೂ ಆವಾಸಸ್ಥಾನವಾದ ಆ ಪರಮಾತ್ಮನ ವಿಷಯದಲ್ಲಿ ಮಿತ್ರ ಅಥವಾ ಶತ್ರು ಎಂಬ ಮಾತಿಗೆ ಅವಕಾಶವೆಲ್ಲಿ ? ಆದ್ದರಿಂದ ಅವನನ್ನು ಶತ್ರುವೆಂದು ಹೇಳುವುದು ಉಚಿತವಲ್ಲ! ಎಂದು ತನ್ನ ತಂದೆಗೆ ಉಪದೇಶಿಸಿದನು.

ಹೀಗೆಯೇ ' ತ್ವಾಂತು ಧಿಕ್ಕುಲಪಾಂಸನಂ ' ರಾಕ್ಷಸಕುಲಕ್ಕೇ ಕಳಂಕಪ್ರಾಯನಾಗಿರುವ ನಿನಗೆ ಧಿಕ್ಕಾರ ಎಂದು ರಾವಣನಿಂದ ಧಿಕ್ಕರಿಸಲ್ಪಟ್ಟ ವಿಭೀಷಣನು .

**ಆತ್ಮಾನಂ ಸರ್ವದಾರಕ್ಷ ಪುರೀಂ ಚೇಮಾಂ ಸರಾಕ್ಷಸಾಂ ।**
**ಸ್ವಸ್ತಿತೇಽಸ್ತು ಗಮಿಷ್ಯಾಮಿ ಸುಖೀಭವ ಮಯಾವಿನಾ ॥**

ನಿನ್ನನ್ನು ನೀನು ರಕ್ಷಿಸಿಕೋ! ರಾಕ್ಷಸರಿಂದ ಕೂಡಿದ ಈ ಪಟ್ಟಣವನ್ನೂ ರಕ್ಷಿಸು, ನಿನಗೆ ಒಳಿತಾಗಲಿ, ನಾನು ಹೋಗುತ್ತೇನೆ ನನ್ನನ್ನು ಬಿಟ್ಟು ನೀನು ವಿವೇಕಿಯಾಗು. ಎಂದು ಹಿತವಚನವನ್ನಾಡಿ ಹೊರಡುತ್ತಾನೆ ಕೃಪಾಳುವಾದ ವಿಭೀಷಣ. ಪ್ರಪನ್ನಜನರಿಗೆ ಮೂಲಪುರುಷರಾದ ನಮ್ಮಾಳ್ವಾರ್ ಅವರು ಭೂಲೋಕದಲ್ಲಿರುವ ಸಂಸಾರಿ ಚೇತನರಿಗೆ ಮಾಡದಿರುವ ಉಪದೇಶವಿಲ್ಲ. ಸಂಸಾರದಲ್ಲೇ ಆಸಕ್ತರಾಗಿರುವ ಆ ಜನರಿಗೆ ತಮ್ಮ ಉಪದೇಶ ಹಿಡಿಸದು ಎಂದು ತಿಳಿದಿದ್ದರೂ, " ಶೊನ್ನಾಲ್ ವಿರೋಧಮಿದು—ಆಹಿಲುಂ ಶೊಲ್ಲುವನ್ "

' ಹೇಳಿದರೆ ವಿರೋಧ ಆದರೂ ಹೇಳುವೆನು. ' ಎಂದು ಅವರ ವಿರೋಧವನ್ನೂ, ಲೆಕ್ಕಿಸದೆ ಮತ್ತಾರು ಉಪದೇಶಿಸುವರು ? ಇವರ ಈ ಕೃಪೆಯನ್ನೇ ಮಧುರಕವಿ ಯಾಳ್ವಾರರು.

" ಅರುಳ್ ಕೊಂಡಾಂಡುಂ ಅಡಿಯವರಿನ್ಬುರ
ಅರುಳಿನಾನ್ ಅವ್ವರುಮರ್ಯಯಿನ್ ಪೊರುಳ್
ಅರುಳ್ ಕೊಂಡಾಯಿರಮಿನ್ತಮಿಳ್ ಪಾಡಿನಾನ್
ಅರುಳ್ ಕಂಡೀರ್ ಇವ್ವುಲಹಿನಿಲ್ ಮಿಕ್ಕದೇ

ಎಂದು ಹಾಡಿ ಹೊಗಳಿದರು. ಇವರ ಪಾದಕಮಲಗಳನ್ನಾಶ್ರಯಿಸಿದ (ಅಡಿಪಣಿ ನ್ದುಯ್ದ್ದವರ್) ಆಚಾರ್ಯ ರಾಮಾನುಜರು ಹೀಗೆಯೇ ಪರಮದಯಾಸಿಧಿ ಎಂಬುದೇ ಮೇಲೆ ಹೇಳಿದ ಶ್ರೀಸೂಕ್ತಿಯ ಸಾರಾಂಶ.

ಆಚಾರ್ಯರ ರಾಮಾನುಜರಿಗೆ ದೇಹವಿಯೋಗ ಕಾಲ. ಅವರನ್ನು ತಮ್ಮ ಜೀವಕ್ಕಿಂತಲೂ ಹೆಚ್ಚಾಗಿ ಪ್ರೀತಿಸುವ ಶಿಷ್ಯಸಮೂಹವೆಲ್ಲವೂ ಆಚಾರ್ಯರನ್ನು ಸುತ್ತುವರಿದಿದೆ. ಆಚಾರ್ಯರಿಗೆ ಪ್ರಾಣವಿಯೋಗವಾದರೆ ಈ ಲೋಕದಲ್ಲಿ ಬದುಕಿರುವುದಕ್ಕಿಂತ ತಾವೂ ಪ್ರಾಣಬಿಡುವುದೇ ಲೇಸು ಎಂಬ ದೃಢನಿರ್ಧಾರ ಶಿಷ್ಯರ ಮುಖದಲ್ಲಿ ಮೂಡಿತು. ಇದನ್ನರಿತ ಆಚಾರ್ಯರು ' ನೀವು ನನ್ನ ಮರಣಾ ನಂತರ ದೇಹತ್ಯಾಗ ಮಾಡಿದರೆ ನನ್ನ ಆಚಾರ್ಯರಾದ ಯಾಮುನರ ಪಾದದಾಣೆ ' ಎಂದು ಹೇಳಿ ಅವರ ನಿರ್ಧಾರವನ್ನು ಬದಲಿಸಿದರು.

ನಾವು ಪ್ರಪನ್ನರಾದ ಪಕ್ಷದಲ್ಲಿ ನಮ್ಮ ದೇಹಯಾತ್ರೆಯ ವಿಷಯ ವಾಗಿಯೂ, ಆತ್ಮಯಾತ್ರೆಯ ವಿಷಯವಾಗಿಯೂ ಚಿಂತಿಸಬೇಕಾದ್ದಿಲ್ಲ. ಪರಮಾತ್ಮನಿಗೆ ಆತ್ಮಸಮರ್ಪಣೆಯನ್ನು ಮಾಡಿದ ನಂತರ ನಾವು ಪುನಃ ಆತ್ಮ ಚಿಂತನೆಯನ್ನು ಮಾಡಿದ ಪಕ್ಷದಲ್ಲಿ, ಹಿಂದೆ ಮಾಡಿದ ಆತ್ಮಸಮರ್ಪಣವು ಸುಳ್ಳಾಗುವುದಲ್ಲವೇ ? ಆಗಂತೂ ನಾವು ಪ್ರಪನ್ನರಾಗುವುದಿಲ್ಲ. ದೇಹಯಾತ್ರೆಯ ವಿಷಯವಾಗಿಯೂ ನಾವು ಚಿಂತಿಸಬೇಕಾದ್ದಿಲ್ಲ. ಕಾರಣ, ಅದು ಕರ್ಮಾಧೀನ. ಒಬ್ಬನು ಐಶ್ವರ್ಯಕ್ಕೋಸ್ಕರ ಯಾವವಿಧವಾದ ಪ್ರಯತ್ನ ಮಾಡದಿದ್ದರೂ ಅವ

ನಿಗೆ ಐಶ್ವರ್ಯವು ತಾನಾಗಿ ಬಂದು ಸೇರುತ್ತದೆ, ಮತ್ತೊಬ್ಬನು ಹಗಲು ರಾತ್ರಿಯೆನ್ನದೆ ಶ್ರಮಿಸಿದರೂ, ಅವನಿಗೆ ಕಿಲುಬು ಕಾಸೂ ದೊರೆಯುವುದಿಲ್ಲ ಕುಡಿಯಲು ಗಂಜಿಯೂ ಸಿಗವುದಿಲ್ಲ.

**ಅಚೇಷ್ಟಮಾನಮಾಸೀನಂ ಶ್ರೀಃ ಕಂಚಿದುಪತಿಷ್ಠತಿ ।**
**ಕರ್ಮೀ ಕರ್ಮಾನುಸೃತ್ಯಾನ್ಯೋ ನ ಪ್ರಾಶ್ಯಮಧಿಗಚ್ಛತಿ ॥**

ಎಂದರು ಇದನ್ನು ತಿಳಿದ ಆಚಾರ್ಯರು.

ಕಾಳಿದಾಸನು :

**ಲಭೇತ ವಾ ಪ್ರಾರ್ಥಯಿತಾ ನವಾ ಶ್ರಿಯಂ ।**
**ಶ್ರಿಯಾ ದುರಾಪಃ ಕಥಮೀಪ್ಸಿತೋ ಭವೇತ್ ॥**

ದಿನಬೆಳಗೂ ಪ್ರಾರ್ಥನೆ ಮಾಡುವವನಿಗೆ ಲಕ್ಷ್ಮಿಯು ದೊರಕದಿರಬಹುದು, ಆದರೆ ಲಕ್ಷ್ಮಿಯೇ ಒಬ್ಬನ ಮೇಲೆ ತನ್ನ ಕಟಾಕ್ಷವನ್ನು ಬೀರಿದಾಗ ಅವನಿಗೆ ಐಶ್ವರ್ಯವು ಖಂಡಿತ ಸಿದ್ಧಿಸುವುದು—ಎಂದು ಹೇಳಿದ್ದಾನೆ ಮುಖ್ಯವಾಗಿ ನಮ್ಮ ಕರ್ಮಾನುಗುಣವಾಗಿ, ಆಹಾರ ಐಶ್ವರ್ಯ ಎಲ್ಲವೂ ದೊರಕುವುವು. ಆದ್ದರಿಂದಲೇ ಪೂರ್ವಾಚಾರ್ಯರ ಉಕ್ತಿ :

**ನಾಹಾರಂ ಚಿಂತಯೇತ್ ಪ್ರಾಜ್ಞಃ ಧರ್ಮಮೇವಾನು ಚಿಂತಯೇತ್ ।**
**ಆಹಾರೋಪಿ ಮನುಷ್ಯಾಣಾಂ ಜನ್ಮನಾ ಸಹ ಜಾಯತೇ ॥**

ಜ್ಞಾನಿಯಾದವನು ತನ್ನ ಆಹಾರವನ್ನು ಕುರಿತು ಚಿಂತಿಸಬಾರದು ಧರ್ಮವನ್ನೇ ಚಿಂತಿಸಬೇಕು. ಹುಟ್ಟಿದಾಗಲೇ ಪ್ರತಿಯೊಬ್ಬ ವ್ಯಕ್ತಿಯ ಆಹಾರವೂ ಅವನ ಕರ್ಮಾನುಗುಣವಾಗಿ ಸೃಷ್ಟಿಸಲ್ಪಡುತ್ತದೆ.

ಸುಂದರವಾದ ಒಂದು ಕಥೆಯಿಂದ ಈ ಅಭಿಪ್ರಾಯವನ್ನು ಆಚಾರ್ಯರು ತಿಳಿಸುತ್ತಾರೆ. ಒಬ್ಬ ಭಿಕ್ಷುಕ ಅನೇಕ ದಿವಸಗಳಿಂದ ಒಂದೇ ಊರಿನಲ್ಲಿ ಭಿಕ್ಷೆ ಬೇಡುತ್ತಿದ್ದುದರಿಂದ ಯಾರೂ ಭಿಕ್ಷೆಯನ್ನು ಕೊಡಲಿಲ್ಲ. ಬೇರೆ ಊರಿಗಾದರೂ ಹೋಗಿ ಭಿಕ್ಷೆಯೆತ್ತೋಣ ಎಂಬ ಭಾವನೆಯಿಂದ ಮತ್ತೊಂದು ಊರನ್ನು ಅರಸಿ

ಹೊರಟಿದ್ದಾನೆ. ದಾರಿಯಲ್ಲಿ ಭೀಕರವಾದ ಕಾಡು. ಇವನು ಕಾಡಿನಲ್ಲಿ ಹೋಗುತ್ತಿದ್ದಾಗ ಶ್ರೀಮನ್ನಾರಾಯಣನು ಮತ್ತು ಶ್ರೀದೇವಿಯು ಆಕಾಶ ಮಾರ್ಗದಲ್ಲಿ ಸಂಚರಿಸುತ್ತಿದ್ದಾರೆ ತಾಯಿಯಾದ ಶ್ರೀದೇವಿಯು, ಹೊಟ್ಟೆಗಿಲ್ಲದೆ ಈ ರೀತಿ ಕಷ್ಟ ಪಡುತ್ತಾನಲ್ಲ ಇವನಿಗೆ ಏನಾದರೂ ಕೊಡೋಣ, ಎಂದು ನಾರಾಯಣನಿಗೆ ಹೇಳಿದಾಗ, ಶ್ರೀಮನ್ನಾರಾಯಣನು ಇದು ಸಾಧ್ಯವಿಲ್ಲ. ಇದನ್ನು ಅನುಭವಿಸಲು ಇವನು ಕೊಟ್ಟಿಟ್ಟವನಲ್ಲ ಎಂದನು. ಹೇಗಾದರಾಗಲಿ ಕೊಟ್ಟು ನೋಡೋಣ ಎಂದು ಶ್ರೀದೇವಿ ಬಲಾತ್ಕರಿಸಿದಾಗ ಪರಮಾತ್ಮನು ಒಂದು ಹಣದ ಗಂಟನ್ನು ಅವನು ಬರುವ ದಾರಿಯಲ್ಲಿ ಇಟ್ಟನು. ಭಿಕ್ಷುಕನಿಗೆ ಈಗ ಮನಸ್ಸಿನಲ್ಲಿ ಒಂದು ಯೋಚನೆ ಬಂದಿತು, ನಾನು ಆಹಾರವಿಲ್ಲದೆ ಕಷ್ಟಪಡುತ್ತಿದ್ದರೂ ಪೂರ್ವಜನ್ಮ ಸುಕೃತದಿಂದ ಕಣ್ಣುಗಳಾದರೂ ಚೆನ್ನಾಗಿ ಕಾಣಿಸುತ್ತವೆ. ಆಹಾರವಿಲ್ಲದೆ, ಕಣ್ಣುಗಳೂ ಕಾಣಿಸದೆ ಇನ್ನೂ ಅನೇಕ ಜನ ಭಿಕ್ಷುಕರು ಹೇಗೆ ಮುಂದೆ ನಡೆಯುತ್ತಾರೆ ನೋಡೋಣ ಎಂದು ಯೋಚಿಸುತ್ತಾ ಅವನು ಕಣ್ಣನ್ನು ಮುಚ್ಚಿಕೊಂಡು ನಡೆದನು. ಹಣದ ಗಂಟು ಇದ್ದ ಜಾಗವನ್ನು ದಾಟಿದ ನಂತರ ಕಣ್ಣನ್ನು ತೆರೆದನು. ಆದ್ದರಿಂದ ಪರಮಾತ್ಮನು ಯಾವುದನ್ನು ಅನುಗ್ರಹಿಸಿದರೂ ಅದನ್ನು ಅನುಭವಿಸುವ ಸುಕೃತವನ್ನು ನಾವು ಮಾಡಿರಬೇಕು. ಇದರಂತೆಯೇ ಮತ್ತೊಬ್ಬ ಮೂರ್ಖನು ಮರದತುದಿಯಲ್ಲಿ ನಿಂತು ಬುಡವನ್ನು ಕಡಿಯುತ್ತಿದ್ದನು. ಆಗ ಶ್ರೀದೇವಿಯು ಇವನನ್ನು ರಕ್ಷಿಸೋಣವೆಂದಳು. ಆಗ ಪರಮಾತ್ಮನು ಅವಳನ್ನು ಕುರಿತು ಆ ಮೂರ್ಖನು 'ಅಮ್ಮಾ' ಎಂದು ಕೆಳಗಡೆ ಬಿದ್ದರೆ ನೀನು ರಕ್ಷಿಸು, 'ಅಪ್ಪಾ' ಎಂದು ಕೆಳಗೆ ಬಿದ್ದರೆ ನಾನು ರಕ್ಷಿಸುತ್ತೇನೆ ಎಂದನು. ಆದರೆ ಮೂರ್ಖನು ಬೀಳುವಾಗ 'ಅಯ್ಯೋ' ಎಂದು ಕೆಳಗೆ ಬಿದ್ದು ಸತ್ತನು. ಆದ್ದರಿಂದ ಜೀವಿಸಕೂಡದೆಂದಿರುವಾಗ ಅಂತಹ ಮಾತು ಹೊರಡಲಾರವು.

**ಯೋ ಮೇ ಗರ್ಭಗತಸ್ಯಾತಿ ವೃತ್ತಿಂಕಲ್ಪಿತವಾನ್ಪ್ರಭುಃ ।**
**ಶೇಷವೃತ್ತಿವಿಧಾನೇಪಿ ಕಿಂಸುಪ್ತಸೋಥವಾ ಮೃತಃ ॥**

ಶಿಶುವು ಗರ್ಭದಲ್ಲಿರುವಾಗಲೇ ಪರಮಾತ್ಮನು ಅದಕ್ಕೆ ಆಹಾರಾದಿಗಳನ್ನು ಸಿದ್ಧಪಡಿಸಿದ್ದಾನೆ ಹೀಗಿರುವಾಗ ನಾವು ಅವನನ್ನು ಆಶ್ರಯಿಸಿದ ನಂತರ

ಪರಮಾತ್ಮನೇನು ನಿದ್ರಿಸುತ್ತಿದ್ದಾನೆಯೇ ಅಥವಾ ಮೃತನಾಗಿದ್ದಾನೆಯೇ? ಎಂದು. ಆಚಾರ್ಯ ರಾಮಾನುಜರು ಈ ರೀತಿ ಶಿಷ್ಯರಿಗೆ ಉಪದೇಶಮಾಡಿ ಅವರು ಪ್ರಾಣತ್ಯಾಗ ಮಾಡುವುದನ್ನು ತಪ್ಪಿಸಿದರು.

ತಾವು ವೈಕುಂಠವಾಸಿಗಳಾಗುವುದಕ್ಕೆ ಮುಂಚೆ ರಾಮಾನುಜರು ಶಿಷ್ಯರಿಗೆ ಕೆಲವು ಹಿತವಚನಗಳನ್ನು ಉಪದೇಶಿಸಿದರು.

1 ಭಾಷ್ಯತ್ತೈ ಪ್ರವರ್ತಿಪ್ಪಿತ್ತಲ್—ಗುರುಮುಖವಾಗಿ ಶ್ರೀಭಾಷ್ಯ ವನ್ನು ಅಧ್ಯಯನ ಮಾಡಿ ಅದನ್ನು ಪ್ರವಚನ ಮಾಡುವುದು ಪ್ರತಿಯೊಬ್ಬ ಶ್ರೀವೈಷ್ಣವನೂ ಮಾಡಬೇಕಾದ ಮೊದಲನೆಯ ಕೈಂಕರ್ಯ. ಶ್ರೀಭಾಷ್ಯದಲ್ಲೇ ಮಂಗಳ ಶ್ಲೋಕದಲ್ಲಿ 'ಭೌಮಾಃ ಪಿಬಂತ್ವನ್ವಹಂ' ಭೂಸುರರು ಈ ಅಮೃತ ವನ್ನು ನದಾ ಪಾನ ಮಾಡಲಿ ಎಂದು ಆಶಿಸಿದರು ಆಚಾರ್ಯ ರಾಮಾನುಜರು. ಇದು ಸಾಧ್ಯವಾಗಡಿದ್ದ ಪಕ್ಷದಲ್ಲಿ.

2 ಅರುಳಿಚ್ಚೆಯಲ್ಲೈ ಕೇಟ್ಟು ಪ್ರವರ್ತಿಪ್ಪಿತ್ತಲ್ — ಆಳ್ವಾರ್‌ಗಳು ಹಾಡಿರುವ ದಿವ್ಯ ಪ್ರಬಂಧಗಳನ್ನು ಅಧ್ಯಯನ ಮಾಡಿ ಅವುಗಳು ಎಲ್ಲೆಡೆಯಲ್ಲೂ ಹರಡುವಂತೆ ಮಾಡುವುದು. ಪರಾಶರ ಭಟ್ಟರ ಅಭಿಪ್ರಾಯದಲ್ಲಿ ವಿಷ್ಣು ಪುರಾಣ ಮೊದಲಾದ ಗ್ರಂಥಗಳಿಗಿಂತ ದಿವ್ಯಪ್ರಬಂಧಗಳು ಇನ್ನೂ ಹೃದಯಂಗ ಮವಾದುವು. (ಪರಾಶರಪ್ರಬಂಧಾದಪಿ ಚಿತ್ತರಂಜಕತಮೇ) 'ಕೇಟ್ಟಾರಾರ್ ವಾನವರ್‌ಗಳ ಶೆವಿಕ್ಕಿನಿಯ ಶೆಂಜೊಲ್' ಕೇಳಿದವರ ಕಿವಿಗಳಿಗೆ ಇಂಪಾದ ಸುಂದರ ಸೂಕ್ತಿಗಳಿವು. ಇದೂ ಸಾಧ್ಯವಾಗದಿದ್ದಲ್ಲಿ.

ಉಹಂದರುಳಿನ ದಿವ್ಯದೇಶಂಗಳುಕ್ಕು ಅಮುದುಪಡಿ ಶಾತ್ತುಪಡಿ ತಿರು ಮಾಲೈ ತಿರುವಿಳಕ್ಕು ಸಮರ್ಪಿತ್ತಲ್, ಭಗವಂತನು ಆಶಿಸಿ ಅನುಗ್ರಹಿಸಿದ ದಿವ್ಯದೇಶಗಳಿಗೆ ನೈವೇದ್ಯ, ಗಂಧ, ಮಾಲೆ ಮತ್ತು ದೀಪಗಳನ್ನು ಸಮರ್ಪಿಸು ವುದು. ಇದೂ ಸಾಧ್ಯವಿಲ್ಲದ ಪಕ್ಷದಲ್ಲಿ.

4 ದ್ವಯತ್ತೈ ಅರ್ಥತ್ತುಡನ್—ಅನುಸಂಧಿತ್ತಲ್ ಗದ್ಯತ್ರಯದಲ್ಲಿ "ದ್ವಯ ಮರ್ಥಾನುಸಂಧಾನೇನ ಸಹ ಸದೈವಂ ವಕ್ತಾ" ಎಂದು ಹೇಳಿರುವಂತೆ

ಯಾವಾಗಲೂ ದ್ವಯಮಂತ್ರವನ್ನು ಅರ್ಥದೊಡನೆ ಅನುಸಂಧಾನ ಮಾಡು ವುದು. ಅದೂ ಇಲ್ಲದಿದ್ದರೆ.

5 ಎನ್ನುಡೈಯವನ್ ಎನ್ರು ಅಭಿಮಾನಿಪ್ಪಾನೊರು ಶ್ರೀವೈಷ್ಣವನ್ ಅಭಿಮಾನತ್ತಿಲ್ ಒದುಂಗಿ ವರ್ತಿತ್ತಲ್

ನನ್ನವನು ಎಂದು ಅಭಿಮಾನಿಸುವ ಒಬ್ಬ ಶ್ರೀ ವೈಷ್ಣವನ ಅಭಿಮಾನ ದಲ್ಲಿ ಅಡಗಿ ವರ್ತಿಸುವುದು. ಈ ರೀತಿ ಮುಖ್ಯವಾದ ಜೀವನ ಧ್ಯೇಯಗಳನ್ನು ಪ್ರತಿಪಾದಿಸಿದ ನಂತರ ಮತ್ತೆ ಮೂರು ವಿಷಯಗಳನ್ನು ಹೇಳಿದರು :

1 ಅನುಕೂಲರೊಡನೆ ಸಹವಾಸ ಮಾಡುವುದು.

2 ಪ್ರತಿಕೂಲರ ಸಹವಾಸವನ್ನು ತ್ಯಜಿಸುವುದು.

3 ಉದಾಸೀನರಂತೆ ವರ್ತಿಸದಿರುವುದು.

1 ಅನುಕೂಲರಾದವರು ಭಗವದ್ಭಕ್ತರು. ಅವರನ್ನು ಅತ್ಯಂತ ಭಕ್ತಿ ಗೌರವಗಳಿಂದ ಶ್ರೀವೈಷ್ಣವನು ಆದರಿಸಬೇಕು. ಅವರನ್ನು ತಿರಸ್ಕರಿಸಿದ ಪಕ್ಷ ದಲ್ಲಿ ಪರಮಾತ್ಮನು ಖಂಡಿತವಾಗಿಯೂ ನಮ್ಮನ್ನು ಅಂಗೀಕರಿಸುವುದಿಲ್ಲ.

2 ಭಗವಂತನನ್ನು ದ್ವೇಷಿಸುವವರು ಪ್ರತಿಕೂಲರು. ಅವರ ಸಹವಾಸ ವನ್ನು ನಾವು ಎಂದಿಗೂ ಮಾಡಬಾರದು. ಯಾರು ಭಗವಂತನನ್ನು ದ್ವೇಷಿಸು ತ್ತಾರೋ, ಅವನನ್ನು ಸ್ಮರಿಸುವುದಿಲ್ಲವೋ, ಪುಣ್ಯತೀರ್ಥಗಳ ಪ್ರವಾಸ ಮಾಡಿ ದರೂ ಅವರಿಗೆ ಶ್ರೇಷ್ಠವಾದ ಗತಿಯಿಲ್ಲ. ಅವರ ಸಹವಾಸ ಮಾಡಿದವರಿಗೂ ಇಂತಹ ಸ್ಥಿತಿಯೇ.

**ಯೇ ದ್ವಿಷಂತಿ ಮಹಾತ್ಮಾನಂ ನ ಸ್ಮರಂತಿ ಚ ಕೇಶವಂ ।**
**ನತೇಷಾಂ ಪುಣ್ಯತೀರ್ಥೇಷು ಗತಿಸ್ಸಂಸರ್ಗಿಣಾಮಪಿ ॥**

ಎನ್ನುತ್ತದೆ ಶಾಸ್ತ್ರ.

3 ಉದಾಸೀನರು ಸಂಸಾರಿಗಳು. ಅವರ ಸ್ವಭಾವವನ್ನು ಸುಂದರ ವಾದ ಕಥೆಯಿಂದ ನಿರೂಪಿಸಿದ್ದಾರೆ ಆಚಾರ್ಯರು :

ಒಂದು ಸಲ ನಾರದರು ಭೂಲೋಕ ಯಾತ್ರೆ ಮಾಡಿದರು. ಆಗ ಒಂದು ಊರಿನಲ್ಲಿ ತಂಗಿ, ಸಂಸಾರಿಗಳಿಗೆ ಬೆಳಿಗ್ಗೆ ವೇದಾಂತವನ್ನೂ ಸಾಯಂಕಾಲ ಪುರಾಣಾದಿಗಳನ್ನೂ ಉಪದೇಶಿಸುವುದಾಗಿಯೂ ತಿಳಿಸಿದರು. ಕೆಲವೇ ದಿನಗಳಲ್ಲಿ ಪ್ರವಚನವನ್ನು ನಿಲ್ಲಿಸಿ, ತಮ್ಮ ಊರಿಗೆ ಹಿಂದಿರುಗುವುದಾಗಿ ಹೇಳಿದರು. ಸಂಸಾರಿಗಳು ಕಾರಣವೇನೆಂದು ವಿಚಾರಿಸಿದಾಗ :

**ಅದ್ಯ ಪ್ರಭೃತಿ ಯೇ ಲೋಕಾಃ ಯೂಯಂ ಯೂಯಂ**
**ವಯಂ ವಯಂ ।**
**ಅರ್ಥಕಾಮಪರಾ ಯೂಯಂ ನಾರಾಯಣಪರಾ ವಯಂ॥**
**ವಯಂ ತು ಕಿಂಕರಾ ವಿಷ್ಣೋಃ ಯೂಯಮಿಂದ್ರಿಯ**
**ಕಿಂಕರಾಃ ।**
**ನಾಸ್ತಿ ಸಂಗತಿರಸ್ಮಾಕಂ ಯುಷ್ಮಾಕಂ ಚ ಪರಸ್ಪರಂ ॥**

'ಎಲೈ ಸಂಸಾರಿಗಳೇ ! ಇಂದಿನಿಂದ ನೀವು ನೀವೇ, ನಾವು ನಾವೇ, ನೀವು ಅರ್ಥಕಾಮಪರರು. ನಾವು ನಾರಾಯಣಪರರು. ನಾವು ನಾರಾಯಣನ ಸೇವಕರು. ನೀವು ಇಂದ್ರಿಯಗಳಿಗೆ ಅಡಿಯಾಳುಗಳು. ನಿಮಗೂ ನಮಗೂ ಪರಸ್ಪರ ಹೊಂದುವುದಿಲ್ಲ. ಆದ್ದರಿಂದ ನಿಮ್ಮನ್ನು ನಮ್ಮ ಮಾರ್ಗಕ್ಕೆ ತರುವುದಕ್ಕೆ ಬದಲು ನಾನೇ ನಿಮ್ಮ ಮಾರ್ಗಕ್ಕೆ ಬರಬಹುದು, ನಾನಿನ್ನು ಹೊರಡುವೆ ಎಂದು ಹೊರಟರು. ಇದು ಸಂಸಾರಿಗಳ ಸ್ವಭಾವ. ಹೀಗೆ ನಾವು ಅರ್ಥಕಾಮಪರರಾಗಿರದೆ ಪರಮಾತ್ಮನ ಉಪಾಸನೆ ಮಾಡುವುದೇ ನಮ್ಮ ಕರ್ತವ್ಯ.

ಆಚಾರ್ಯ ರಾಮಾನುಜರು ಅನುಗ್ರಹಿಸಿದ ಸಿದ್ಧಾಂತದ ಪರಮ ಸಾರವಿದು. ಉಪನಿಷತ್ತುಗಳಲ್ಲಿ ೨ ವಿಧವಾದ ಶ್ರುತಿಗಳಿವೆ ಭೇದಶ್ರುತಿ ಅಭೇದಶ್ರುತಿ

ಕೆಲವರು ಭೇದಶ್ರುತಿಗಳಿಗೆ ಪ್ರಾಧಾನ್ಯವಿತ್ತು ಅಭೇದಶ್ರುತಿಗಳನ್ನು ಕಡೆಗಣಿಸಿದರು. ಮತ್ತೆ ಕೆಲವರು ಅಭೇದಶ್ರುತಿಗಳಿಗೆ ಪ್ರಾಧಾನ್ಯವಿತ್ತು ಭೇದಶ್ರುತಿಗಳನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ.

ನಮ್ಮ ಭಾಷ್ಯಕಾರರು ವೇದವು ಸರ್ವಾಂಶೇ ಪ್ರಮಾಣ. ಆದ್ದರಿಂದ ಭೇದಶ್ರುತಿಗಳೂ ಪ್ರಮಾಣ, ಅಭೇದಶ್ರುತಿಗಳೂ ಪ್ರಮಾಣ—ಈ ಎರಡು

ಶ್ರುತಿಗಳಿಗೂ ಇರುವ ಪರಸ್ಪರ ವಿರೋಧವನ್ನು ಘಟಕ ಶ್ರುತಿಗಳಿಂದ ಪರಿಹರಿಸ ಬಹುದು. ಎಂದು ತೋರಿಸಿ ಕೊಟ್ಟರು. ಈ ಘಟಕ ಶ್ರುತಿಗಳಿಂದ ಚೇತನಾ ಚೇತನಗಳಿಗೂ ಪರಮಾತ್ಮನಿಗೂ ಭೇದವಿದೆಯೆಂದು ತೋರಿಸಲು ಸಾಧ್ಯ. ಅಭೇದವಿದೆಯೆಂದು ತೋರಿಸಲೂ ಸಾಧ್ಯವಿದೆ.

ಯಸ್ಯಪೃಥಿವೀ ಶರೀರಂ, ಯಸ್ಯ ಆತ್ಮಾ ಶರೀರಂ, ಮೊದಲಾದ ಶ್ರುತಿಗಳು ಪರಮಾತ್ಮನಿಗೂ ಮತ್ತು ಜೀವಾತ್ಮನಿಗೂ, ಪರಮಾತ್ಮನಿಗೂ ಮತ್ತು ಅಚೇತನಗಳಿಗೂ ಇರುವ ಶರೀರ ಶರೀರಿ ಭಾವ ಸಂಬಂಧವನ್ನು ತೋರಿಸುತ್ತವೆ ಈ ಶರೀರ ಶರೀರಿ ಭಾವವನ್ನು ರಾಮಾನುಜರು ಅತ್ಯಂತ ಹೃದಯಂಗಮವಾಗಿ ಶ್ರೀ ಭಾಷ್ಯದಲ್ಲಿ ವಿವರಿಸಿದ್ದಾರೆ.

ಇದರ ಆಧಾರದ ಮೇಲೆಯೇ ಭೇದ ಮತ್ತು ಅಭೇದ ಎರಡನ್ನೂ ಆಚಾರ್ಯ ರಾಮಾನುಜರು ಸಮರ್ಥಿಸಿದರು. ಈ ರೀತಿ ಆಚಾರ್ಯ ರಾಮಾನುಜರು ಸಂಸಾರಿ ಚೇತನರಿಗೆ ಮಾಡಿರುವ ಉಪಕಾರಗಳು ಅಸಂಖ್ಯ. ಅವರ ಗುಣಾನು ಭವವನ್ನು ಮಾಡಲು ಇಂತಹ ಸದವಕಾಶವನ್ನು ಕಲ್ಪಿಸಿದ ಉಭಯವೇದಾಂತ ಪ್ರವರ್ತನ ಸಭೆಯವರಿಗೂ, ಅಧ್ಯಕ್ಷ ಸ್ಥಾನವನ್ನಲಂಕರಿಸಿ ಅಲ್ಪಜ್ಞನಾದ ನನ್ನ ಮಾತುಗಳನ್ನು ಕೇಳಿ ಅನುಗ್ರಹಿಸಿದ ಶ್ರೀ ಶ್ರೀ ಯತಿರಾಜಸ್ವಾಮಿಗಳವರಿಗೂ, ಈ ಸಭೆಯನ್ನು ಅಲಂಕರಿಸಿರುವ ಪಂಡಿತಪ್ರಕಾಂಡರಿಗೂ ನನ್ನ ಅನಂತಾನಂತ ವಂದನೆಗಳು.

ALWAR Printers, Malleswaram, Bangalore-560003